DOC NO.73

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಸಂಖ್ಯೆ : ಬೆಂ.ಅ.ಪ್ರಾ/ಅಸ/ಅಅ-3/ಶಾಸ-4/ಪ್ರಾ.ಪ್ರ.ಪ/ಟಿ-೨೦1/2015-16, ದಿನಾಂಕ : ೨.09.2015
No. :

ಅನುಸೂಚಿ-7
(ಉಪವಿಧಿ ಸಂಖ್ಯೆ: 5.3)
ಪ್ರಾರಂಭಿಕ ಪ್ರಮಾಣ ಪತ್ರ

ಅಭಿಯಂತರ ಸದಸ್ಯರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಇವರಿಗೆ,

ಮೆ॥ ಎಕ್ಸ್ಟ್ರೀಮ್ ಎಂಬ್ಲಮ್,
ಎಸ್.ಎಸ್.ಎಸ್. ಛೇಂಬರ್ಸ್,
3ನೇ ಅಡ್ಡರಸ್ತೆ, ನಂ. 239,
ಸ್ಯಾಂಕಿ ರಸ್ತೆ, ಬೆಂಗಳೂರು 560080.

ಮಾನ್ಯರೆ,

ವಿಷಯ: ಕಾಮಗಾರಿಯ ಆರಂಭದ ಬಗ್ಗೆ ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಹೆಬ್ಬಗೋಡಿ ಗ್ರಾಮದ ಸರ್ವೆ ನಂ. 60/6 ರಲ್ಲಿ ನಿರ್ಮಿಸುತ್ತಿರುವ ತಳ+ನೆಲ+11 ಮೇಲಂತಸ್ತುಗಳನ್ನೊಳಗೊಂಡ 113 ವಸತಿ ಘಟಕಗಳು ಮತ್ತು ಕ್ಲಬ್ ಹೌಸ್ ಕಟ್ಟಡಕ್ಕೆ ಅನುಮತಿ ನೀಡುವ ಕುರಿತು.

ಉಲ್ಲೇಖ:
1. ಮಂಜೂರಾತಿಯಾದ ನಕ್ಷೆ ಸಂಖ್ಯೆ: ಬೆಂ.ಅ.ಪ್ರಾ/ನಮ/ಅಸ/ಅಅ-3/ಶಾಸ-4/ಪೂ/51/2014-15, ದಿನಾಂಕ: 23.02.2015
2. ನಿಮ್ಮ ಅರ್ಜಿ ದಿನಾಂಕ: 10.08.2015.
3. ಮಾನ್ಯ ಆಯುಕ್ತರು ರವರ ಆದೇಶ ಸಂಖ್ಯೆ: 4217, ದಿನಾಂಕ: 31.08.2015.

*********

ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಹೆಬ್ಬಗೋಡಿ ಗ್ರಾಮದ ಸರ್ವೆ ನಂ. 60/6 ರಲ್ಲಿ ನಿರ್ಮಿಸುತ್ತಿರುವ ತಳ+ನೆಲ+11 ಮೇಲಂತಸ್ತುಗಳನ್ನೊಳಗೊಂಡ 113 ಘಟಕಗಳ ಬಹುಮಹಡಿ ವಸತಿ ಕಟ್ಟಡದ ನಕ್ಷೆಗೆ ಎಲ್.ಪಿ. ಸಂಖ್ಯೆ: ಬೆಂ.ಅ.ಪ್ರಾ/ನಮ/ಅಸ/ಅಅ-3/ಶಾಸ-4/ಪೂ/51/2014-15, ದಿನಾಂಕ: 23.02.2015 ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾತಿ ನೀಡಲಾಗಿದೆ. ಮುಂದುವರೆದಂತೆ ಉಲ್ಲೇಖ (2) ರ ಅರ್ಜಿಯಂತೆ, ಪ್ರಾಧಿಕಾರದಿಂದ ಉಲ್ಲೇಖ (1) ರಲ್ಲಿ ನೀಡಲಾಗಿರುವ ಮಂಜೂರಾತಿಯಂತೆ **ಬಹುಮಹಡಿ ವಸತಿ ಕಟ್ಟಡದ** ಆವರಣವನ್ನು **ಕಾರ್ಯಪಾಲಕ ಅಭಿಯಂತರು (ಪೂ)** ರವರು ದಿನಾಂಕ: **11.08.2015** ರಂದು ತನಿಖೆ ನಡೆಸಲಾಗಿ ಮತ್ತು ಗುರುತು ಮಾಡಿದ ನಿರ್ಮಿಸಿದ ಅಡಿಪಾಯವನ್ನು ಗುರುತು ಮಾಡಿದ, ಕೊಡಿಸಿದ ಅಂಕಣವನ್ನು ಹೋಲಿಸಿ ಪರಿವೀಕ್ಷಿಸಿ ಕಾಮಗಾರಿ ಕೆಲಸ ಪ್ರಾರಂಭಿಸಿರುವ "**ಬಹುಮಹಡಿ ವಸತಿ**" ಕಟ್ಟಡದ ಕಾಮಗಾರಿಯು ಮಂಜೂರಾದ ನಕ್ಷೆಯ ಮೇರೆಗೆ ಇದ್ದುದು ಕಂಡು ಬಂದಿದೆ. ಆದರಂತೆ ಸದರಿ "**ಬಹುಮಹಡಿ ವಸತಿ**" ಕಟ್ಟಡದ ಕಾಮಗಾರಿಯನ್ನು ಮುಂದುವರೆಸಲು ಈ ಕೆಳಕಂಡ ಷರತ್ತುಗೊಳಪಡಿಸಿ ಅನುಮತಿ ನೀಡಿದೆ.

1. ಕಾಮಗಾರಿಯಲ್ಲಿ ಯಾವುದೇ ಮಿತಿಮೀರುವಿಕೆ, ಬದಲಾವಣೆಗಳನ್ನು ಮಾಡದೆ ಅಥವಾ ನಿಯಮ ಉಪವಿಧಿಯನ್ನು ಉಲ್ಲಂಘಿಸದಂತೆ ಮಂಜೂರಾದ ಯೋಜನೆಯ ಪ್ರಕಾರ ಕಟ್ಟುನಿಟ್ಟಾಗಿ ಕಾಮಗಾರಿಯನ್ನು ನಡೆಸತಕ್ಕದ್ದು.
2. ಕಾಮಗಾರಿಯ, ಅಂತಸ್ತುಗಳನ್ನು ಮಾಡುವ ಕಾರ್ಯ ಮುಖ್ಯವಾದ ಹಂತವನ್ನು ತಲುಪಿದಾಗ, ಕಾರ್ಯ ಪ್ರಗತಿಯ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ತಿಳಿಸುವ ಮೂಲಕ ಮಂಜೂರಾದ ನಕ್ಷೆ, ನಿಯಮಗಳು ಉಪವಿಧಿಗಳ ಮೇರೆಗೆ ನಿರ್ಮಾಣ ಕಾರ್ಯವು ನಡೆದಿರುವ ಬಗ್ಗೆ ಪರೀಕ್ಷೆ ನಡೆಸಲು ಪ್ರಾಧಿಕಾರಕ್ಕೆ ಅನುಕೂಲ ಕಲ್ಪಿಸಿ ಕೊಡತಕ್ಕದ್ದು.
3. ನಕ್ಷೆ ಮಂಜೂರಾತಿಯಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು, ತಪ್ಪಿದ್ದಲ್ಲಿ ನೀಡಲಾಗಿರುವ ನಕ್ಷೆ ಮಂಜೂರಾತಿಯನ್ನು ರದ್ದುಪಡಿಸುವುದಲ್ಲದೇ ಸ್ವಾಧೀನಾನುಭವ ಪತ್ರವನ್ನು ನೀಡಲಾಗುವುದಿಲ್ಲ.

ಆಯುಕ್ತರ ಪರವಾಗಿ
ಮಂಜೂರಾತಿ ನೀಡಿದವರ ಸಹಿ ಮತ್ತು
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

ಪ್ರತಿಯನ್ನು ಕಾರ್ಯಪಾಲಕ ಅಭಿಯಂತರರು (ಪೂ) ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
T. Chowdiah Road, Kumarapark West, Bangalore - 560 020, Facsimile : 2334 5799, E-mail : bda@vsnl.com